ವಿಷಯ: ತುಂಗಾ ಮೇಲ್ದಂಡೆ ಯೋಜನೆಯ ರಟ್ಟೀಹಳ್ಳಿ ಉಪವಿಭಾಗದಲ್ಲಿ ಮಾಡಿದ ಖರ್ಚು.

2797 (3968)

ಶ್ರೀ ಯು.ಬಿ.ಬಣಕಾರ (ಹಿರೇಕೆರೂರು): ಮಾನ್ಯ ಭಾರೀ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯ ರಟ್ಟೀಹಳ್ಳಿ ಉಪವಿಭಾಗದಲ್ಲಿ ಕಾರ್ಯಾಲಯ, ಇತರ ಕಟ್ಟಡ ಕಟ್ಟಲು, ಜಮೀನು ಸಮತಟ್ಟು ಮಾಡಲು ಈವರೆಗೆ 4,17,000 ರೂ. ಖರ್ಚು ಮಾಡಿದ್ದು ನಿಜವೇ. (ಕಾರ್ಯವಾರು ವಿವರ ನೀಡುವುದು)

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು):

ಅ) ಹೌದು. ವಿವರಗಳು ಕೆಳಕಂಡಂತಿವೆ:

I) ರಟ್ಟೀಹಳ್ಳಿ ಗ್ರಾಮದ ಸರಕಾರಿ ಜಮೀನು ಸರ್ವೆ ನಂ.290ರಲ್ಲಿ ತುಂಗಾ ಮೇಲ್ದಂಡೆ ಯೋಜನೆ ರಸ್ತೆ ಮತ್ತು ಕಟ್ಟಡಗಳ ನಿರ್ಮಾಣಕ್ಕಾಗಿ ಹಾಲಿ ಇರುವ ತಗ್ಗು ಗುಂಡಿಗಳನ್ನು ಮುಚ್ಚಿ ನೆಲ ಸಮ ಮಾಡಿ ಕಟ್ಟಡಗಳ ಪಾಯಕ್ಕೆ ನೆಲವನ್ನು ತಯಾರಿ ಮಾಡುವುದಕ್ಕೆ.

| | | ಅಂದಾಜು ವೆಚ್ಚ ರೂ. | ನಿವ್ವಳ ವೆಚ್ಚ ರೂ. |
|---|---|---|---|
| 1) | -ಸದರಿ-ಬ್ಲಾಕ್-1 | 53,000-00 | 54,766-00 |
| 2) | -ಸದರಿ-ಬ್ಲಾಕ್-2 | 52,500-00 | 54,052-00 |
| 3) | -ಸದರಿ-ಬ್ಲಾಕ್-3 | 52,000-00 | 49,864-00 |
| 4) | -ಸದರಿ-ಬ್ಲಾಕ್-4 | 50,000-00 | 55,000-00 |
| 5) | -ಸದರಿ-ಬ್ಲಾಕ್-5 | 50,500,00 | 50,581-00 |
| 6) | ದೊಡ್ಡ ಕಲ್ಲುಗಣಿ ಸಂರಕ್ಷಿತ ಹಾಗೂ ರಸ್ತೆ ನಿರ್ಮಾಣಕ್ಕಾಗಿ ನೆಲಸಮ ಮಾಡುವುದು | 1,53,000-00 | 1,53,242-00 |
| | ಒಟ್ಟು | 4,11,000-00 | 4,17,505-00 |

ವಿಷಯ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಹಂಚಿಕೆ.

2798 (3969)

ಶ್ರೀ ಯು.ಬಿ.ಬಣಕಾರ್ (ಹಿರೇಕೇರೂರು): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಒಟ್ಟು ಎಷ್ಟು ಬಿಡಿ ನಿವೇಶನಗಳನ್ನು ಸ್ವಾತಂತ್ರ್ಯಯೋಧರಿಗೆ ಕೊಟ್ಟಿದ್ದಾರೆ (ಅವರ ಹೆಸರುಗಳ ವಿವರ ನೀಡುವುದು)

ಆ) ಈಗ ಅದರಲ್ಲಿ ಎಷ್ಟು ಸ್ವಾತಂತ್ರ್ಯ ಯೋಧರಿಗೆ ನಿವೇಶನದ ಸ್ವಾಧೀನ ಕೊಡಲಾಗಿದೆ.

ಇ) ಇನ್ನು ನಿವೇಶನ ಕೊಡದವರಿಗೆ ಯಾವಾಗ ಕೊಡಲಾಗುವುದು.

ಈ) ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕೂಡಲೇ ಎಲ್ಲರಿಗೂ ನಿವೇಶನ ಕೊಡಲಾಗುವುದೇ?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):

ಅ) ದಿನಾಂಕ: 1-1-94ರಿಂದ ಇಲ್ಲಿಯವರೆವಿಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 23 ಬಿಡಿ ನಿವೇಶನಗಳನ್ನು ಸ್ವಾತಂತ್ರ್ಯ ಯೋಧರಿಗೆ ಹಂಚಿಕೆ ಮಾಡಿರುತ್ತದೆ. ಅವರುಗಳ ಹೆಸರುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ ಮತ್ತು ಇ) ಇವುಗಳ ಪೈಕಿ 10 ಜನರಿಗೆ ಸ್ವಾಧೀನ ಪತ್ರವನ್ನು ನೀಡಲಾಗಿದೆ. ನಿವೇಶನ ಮೌಲ್ಯ ಪಾವತಿ ಮಾಡಿ ಅವಶ್ಯಕ ದಾಖಲೆಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ ಉಳಿದ ಹಂಚಿಕೆದಾರರಿಗೆ ಸ್ವಾಧೀನ ಪತ್ರವನ್ನು ನೀಡಲಾಗುವುದು.

ಈ) ಬಿಡಿ ನಿವೇಶನ ಹಂಚಿಕೆಗಾಗಿ ದಿನಾಂಕ 6-8-97ರಂದು ಸರ್ಕಾರವು ಹೊರಡಿಸಿರುವ ಮಾರ್ಗ ಸೂಚಿಯನ್ವಯ ಪ್ರಾಧಿಕಾರವು ಗುರುತಿಸಿದ ಶೇಕಡ 5ರಷ್ಟು ಬಿಡಿ ನಿವೇಶನಗಳನ್ನು ಸ್ವಾತಂತ್ರ್ಯಯೋಧರಿಗೆ ಮೀಸಲಿಡಲಾಗಿದೆ. ಅದರಂತೆ ಸ್ವಾತಂತ್ರ್ಯಯೋಧರಿಗೆ ಬಿಡಿ ನಿವೇಶನ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ANNEXURE

DETAILS OF FREEDOM FIGHTERS WHO HAVE ALLOTTED STRAYSITES

| Sl. No. | Name of the Freedom Fighters | Site Number and Layout |
|---|---|---|
| 1. | Kusti Basappa | 2516 HAL III Stage, |
| 2. | Sanjeevagowda | 2132 HAL III Stage. |
| 3. | M.Rajagopal | 859 Nagrabhavi II State/XIth Block. |
| 4. | C.S.Ananthaiah | 4BC-123 East of NGEF |
| 5. | M.R.Nathad | 5CM-221 HRBR-II Block |
| 6. | S.Sanjeeva Reddy | 1403 HAL III Stage. |
| 7. | P.M.Srinivas | 227 Nandini Layout |
| 8. | Nagabhushan | 168/C BSK III Stage III PH. I Block. |
| 9. | G.L.Lakshmaiah | 238/B Koramangala IV Block |
| 10. | G.V.Krishna Reddy | 2C-819 HRBR/II Block |
| 11. | C.R.Subbamma | 1299 HBR I Stage IV Block. |
| 12. | P.Channa Reddy | 254 HBR I Stage II Block. |
| 13. | K.Siddalingasastry | 645 Nagarabhavi II Stage IX Block. |
| 14. | M.Munichowdaiah | 58 Nagarabhavi II Stage IV Block. |
| 15. | Kashi Rao Patil | 77/V WCR/IV Stage/IV Block |
| 16. | Ananthacharya | 432 Nagarabhavi II Stage IX Block. |
| 17. | K.Venkatakrishnappa | 567 Sarakki VI Phase |
| 18. | M.Nanjappa | 4BC-115 Easte of NGEF |
| 19. | T.S.Sreerangachar | 4BC-111 East of NGEF |
| 20. | S.Sannananjappa | 206 Nagarabhavi II Stage VIth Block. |
| 21. | Basappa Nagappa Kodigowdal | 1262 HAL III Stage. |
| 22. | B.M.Siddegowda | 1249 HAL III Stage. |
| 23. | N.V.Nayarana Rao | 909 HAL III Stage. |